**ಕಳೆದ ವರ್ಷ ನಿಧನರಾದ ಕವಿ ಜಿ.ಕೆ. ರವೀಂದ್ರಕುಮಾರ್ ಉತ್ತಮ ಪ್ರಬಂಧಕಾರರೂ ಆಗಿದ್ದರು. ಅವರು ಬರೆದ ಕೊನೆಯ ಪ್ರಬಂಧವನ್ನು ಇಲ್ಲಿ ಕೊಡಲಾಗಿದೆ.**

ಸಂಬಂಧವೇ ಅಸಂಬಂಧವೇ ಸಂಬಂಧವಾಗಿ
ಎರಡೂ ಒಂದಾಗೆ ಗುಹೇಶ್ವರ ಲಿಂಗ ಸಂಬಂಧಿ

ಇದು ಅಲ್ಲಮಪ್ರಭುವಿನ ವಚನವೊಂದರಲ್ಲಿ ಬರುವ ಸಾಲು. ಸಂಬಂಧ ಮತ್ತು ಸಂಬಂಧವಲ್ಲದ್ದು ಅಥವ ಹಾಗೆ ಸ್ಪಷ್ಟವಾಗಿ ಕರೆಯಲಾಗದ್ದು ಕೂಡ ಸಂಬಂಧವಾಗಿರಬಹುದಾದ ಸೂಕ್ಷ್ಮವನ್ನು ಆತ ಇಲ್ಲಿ ಮನಗಾಣಿಸಿದ್ದಾನೆ. ಇದಕ್ಕೆ ಹಿನ್ನೆಲೆಯಾಗಿ 'ನಮಃ ಶಿವಾಯ'ದ ಒಂದೊಂದು ಅಕ್ಷರಕ್ಕೂ ಇರುವ ಸಾಂಕೇತಿಕ ಅರ್ಥವನ್ನು ಹೇಳಿ ಪಾರಸ್ಪರಿಕ ಸಂಬಂಧವಿಲ್ಲದ ಅಂಶಗಳೂ ಹೇಗೆ ಒಟ್ಟುಗೂಡಿ ಅರ್ಥಸಂಬಂಧ, ತತ್ತ್ವಸಂಬಂಧವಾಗುತ್ತವೆ ಎಂಬುದನ್ನು ತೋರಿದ್ದಾನೆ. ಇದನ್ನು ವಿವರಿಸಿಕೊಳ್ಳುವುದು ಒಂದು ಕುತೂಹಲದ ನಡೆಯಾಗುತ್ತದೆ. ಸಂಬಂಧ ಮತ್ತು ಅಸಂಬಂಧ ಎರಡೂ ಸಂಬಂಧದ ಇರುವಿಕೆಯನ್ನು ಒಪ್ಪುತ್ತವೆ. ಆದರೆ, ಅದರಲ್ಲಿ ಯಾವುದು ನಿಜವಾದುದು ಎಂದು ಹೇಳುವುದು ಸುಲಭವಲ್ಲ. ಕಷ್ಟವೂ ಜೀವನವೇ ಸುಖವೂ ಜೀವನವೇ. ಇವೆರಡು ಇದ್ದಾಗಲೂ ಅದು ಜೀವನವೇ ತಾನೇ? ಅಂದರೆ ಅರ್ಥಪೂರ್ಣ ಹಾಗು ಅರ್ಥಹೀನತೆಗಳೆರಡೂ ಅರ್ಥಸ್ವರೂಪದ ವಿವರಗಳು ತಾನೇ? ಸಂಬಂಧವಿದ್ದಲ್ಲಿ ಅದು ಇರುವ ಸಂಬಂಧ ಬಿಟ್ಟಲ್ಲಿ ಅದು 'ಬಿಟ್ಟು ಹೋದ ಸಂಬಂಧ'. ಬಿಟ್ಟು ಹೋಗಿರುವುದೂ ಬಿಟ್ಟು ಹೋಗಿರುವ ಹಾಗೆಯೇ ತೋರುವ ಸಂಬಂಧವಾಗಿರಬಹುದಲ್ಲ? ಆದರೆ, ಇವೆರಡಕ್ಕೂ ನಾವು ಕೊಡುವ ಪ್ರತಿಕ್ರಿಯೆ ಮತ್ತು ಅರ್ಥೈಸಿಕೊಳ್ಳುವ ವಿಸಂಗತಿಯಲ್ಲಿ ಬದುಕು ಕಾಣುವ ಬಗೆ ಸ್ವಾರಸ್ಯಕರವಾದುದು.

ಮಗಳನ್ನೇ ಅತ್ಯಾಚಾರ ಮಾಡುವ ತಂದೆ, ಪ್ರೀತಿಗೆ ಅಡ್ಡಿಯಾದ ಅಪ್ಪನನ್ನೇ ಕೊಲೆ ಮಾಡುವ ಮಗಳು ಇರುವ ಈ ಕಾಲವು ಸಂಬಂಧ, ಅಸಂಬಂಧಗಳೆರಡೂ ದಿಗಿಲು ಬಿದ್ದು ಮೈ ಮುಚ್ಚಿಕೊಳ್ಳುವಂತೆ ಮಾಡಿದೆ. ಸಂಬಂಧವೆಂಬುದು ಅನುಮಾನದ ತೆಕ್ಕೆಯಲ್ಲಿ ಜೀವಿಸುತ್ತಿರುವ ಕಾಲವಿದು. ಆಪ್ತತೆಯನ್ನೂ ತಕ್ಕಡಿಯಲ್ಲಿ ತೂಗಿ ಸೋಸಿಕೊಂಡು ಅನುಭವಿಸಬೇಕಾಗಿದೆ. ಅದನ್ನು ಒಡಹುಟ್ಟಿನಲ್ಲಿಯೇ ನೋಡಬಹುದು. ಒಡಹುಟ್ಟಿದವರ ನಡುವಿನ ಇರಿಸು ಮುರಿಸು, ಆಕ್ಷೇಪ, ನಿರೀಕ್ಷೆಗಳು ಅಲ್ಲಿಯೇ ಯಾಕೆ ಹುಟ್ಟುತ್ತವೆ? ಆ ಎಲ್ಲರೂ ಬೇರೆಯವರ ಜೊತೆ ಉದಾರವಾಗಿ, ಸ್ನೇಹಮಯಿಗಳಾಗಿ ಆದರ್ಶವಂತರಂತೆ ಇರುವಾಗಲೂ ಇಲ್ಲಿ ಯಾಕೆ ಹಾಗಿರಲು ಸಾಧ್ಯವಾಗುವುದಿಲ್ಲ? ಒಡಹುಟ್ಟುವಿಕೆಯೆಂಬುದೇ ಅಸಂಬಂಧದ ಅಪೂರ್ಣ ಸಂಕೇತ ಅಥವ ತಿಳಿವಳಿಕೆಯಾಗಿರಬಹುದೇ? ಹುಟ್ಟಿದ ಕೂಡಲೇ ಎಷ್ಟೊಂದು ಸಂಬಂಧಗಳು ಜನ್ಮತಾಳಿಬಿಡುತ್ತವೆ! ಅಪ್ಪ, ಅಮ್ಮ, ಅಕ್ಕ, ತಮ್ಮ, ಅಣ್ಣ, ತಂಗಿ, ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾವ ಹೀಗೆ ಈ ಎಲ್ಲವೂ